# D

# CCE PR
## UNREVISED

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಸೆಪ್ಟೆಂಬರ್, 2020**

**S.S.L.C. EXAMINATION, SEPTEMBER, 2020**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 28. 09. 2020 ] **ಸಂಕೇತ ಸಂಖ್ಯೆ : 83-K (Phy.)**
Date : 28. 09. 2020 ] **CODE NO. : 83-K (Phy.)**

## ವಿಷಯ : ವಿಜ್ಞಾನ

## Subject : SCIENCE

**(ಭೌತಶಾಸ್ತ್ರ / Physics)**

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**(ಕನ್ನಡ ಭಾಷಾಂತರ / Kannada Version)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಒಂದು ತರಂಗದ ಅವಧಿಯನ್ನು ನಾಲ್ಕು ಪಟ್ಟು ಹೆಚ್ಚಿಸಿದಾಗ ಅದರ ಆವೃತ್ತಿಯು<br>(A) 4 ಪಟ್ಟು ಹೆಚ್ಚಾಗುತ್ತದೆ<br>(B) 4 ಪಟ್ಟು ಕಡಿಮೆಯಾಗುತ್ತದೆ<br>(C) 2 ಪಟ್ಟು ಹೆಚ್ಚಾಗುತ್ತದೆ<br>(D) 2 ಪಟ್ಟು ಕಡಿಮೆಯಾಗುತ್ತದೆ<br>***ಉತ್ತರ :*** (B) 4 ಪಟ್ಟು ಕಡಿಮೆಯಾಗುತ್ತದೆ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 5. | ಟ್ರಾನ್ಸಿಸ್ಟರ್‌ನಲ್ಲಿ ಉತ್ಸರ್ಜಕ ಪದರವು<br>(A) ಕಡಿಮೆ ಪ್ರಮಾಣದ ಬೆರಕೆಯನ್ನು ಹೊಂದಿರುತ್ತದೆ<br>(B) ಮಧ್ಯಮ ಪ್ರಮಾಣದ ಬೆರಕೆಯನ್ನು ಹೊಂದಿರುತ್ತದೆ<br>(C) ಹೆಚ್ಚು ಪ್ರಮಾಣದ ಬೆರಕೆಯನ್ನು ಹೊಂದಿರುತ್ತದೆ<br>(D) ಶುದ್ಧ ಅರೆವಾಹಕವಾಗಿರುತ್ತದೆ<br>***ಉತ್ತರ :*** (C) ಹೆಚ್ಚು ಪ್ರಮಾಣದ ಬೆರಕೆಯನ್ನು ಹೊಂದಿರುತ್ತದೆ | 1 |
| 8. | ವೇಗದ ಮಿತಿಯನ್ನು ಮೀರಿ ಚಲಿಸುವ ವಾಹನಗಳನ್ನು ಪತ್ತೆಹಚ್ಚಲು ಬಳಸುವ ತರಂಗಗಳು<br>(A) ರೇಡಿಯೋ ತರಂಗಗಳು (B) ನೇರಳಾತೀತ ತರಂಗಗಳು<br>(C) ಶ್ರವಣಾತೀತ ತರಂಗಗಳು (D) ಶ್ರವಣ ತರಂಗಗಳು<br>***ಉತ್ತರ :*** (A) ರೇಡಿಯೋ ತರಂಗಗಳು | 1 |
| 11. | ***A*-ಪಟ್ಟಿಯಲ್ಲಿ ನಾಕ್ಷತ್ರಿಕ ವಿಕಾಸದ ಪ್ರಮುಖ ಲಕ್ಷಣವನ್ನು ಕೊಡಲಾಗಿದೆ. ಅವುಗಳನ್ನು *B*-ಪಟ್ಟಿಯಲ್ಲಿರುವ ನಕ್ಷತ್ರದ ವಿಕಾಸದ ಹಂತಗಳೊಡನೆ ಹೊಂದಿಸಿ ಮತ್ತು ಉತ್ತರಗಳನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ.** | |


| ***A* ಪಟ್ಟಿ** | ***B* ಪಟ್ಟಿ** |
|---|---|
| (A) ನಕ್ಷತ್ರದ ಹೊರಪದರಗಳು ಉಬ್ಬುತ್ತವೆ | (i) ಆದಿ ನಕ್ಷತ್ರ |
| (B) ಕೇಂದ್ರಭಾಗದಲ್ಲಿ ಹೈಡ್ರೋಜನ್ ಅನಿಲ ಸಂಚಯನಗೊಳ್ಳುತ್ತದೆ | (ii) ಸ್ಥಿರ ಸ್ಥಿತಿ |
| (C) ವಿಕಿರಣಗಳ ಹೊರಮುಖ ಒತ್ತಡಕ್ಕೆ ಗುರುತ್ವದ ಒಳಮುಖ ಬಲವು ಸಮನಾಗುತ್ತದೆ | (iii) ಕೆಂಪು ದೈತ್ಯ |
| (D) ಅತ್ಯಧಿಕ ಸಾಂದ್ರತೆ ಮತ್ತು ಗುರುತ್ವವನ್ನು ಹೊಂದಿರುವ ಸೂಪರ್ನೋವಾ ಅವಶೇಷವಾಗಿರುತ್ತದೆ | (iv) ಶ್ವೇತ ಕುಬ್ಜ |
| | (v) ಪಲ್ಸಾರ್ |
| | (vi) ಕಪ್ಪು ಕುಳಿ |
| | (vii) ಕ್ವಸಾರ್ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಉತ್ತರ :*** | |
| | **A ಪಟ್ಟಿ** — **B ಪಟ್ಟಿ** | |
| | (A) ನಕ್ಷತ್ರದ ಹೊರಪದರಗಳು ಉಬ್ಬುತ್ತವೆ — (iii) ಕೆಂಪು ದೈತ್ಯ — 1 | |
| | (B) ಕೇಂದ್ರಭಾಗದಲ್ಲಿ ಹೈಡ್ರೋಜನ್ ಅನಿಲ ಸಂಚಯನಗೊಳ್ಳುತ್ತದೆ — (i) ಆದಿ ನಕ್ಷತ್ರ — 1 | |
| | (C) ವಿಕಿರಣಗಳ ಹೊರಮುಖ — (ii) ಸ್ಥಿರ ಸ್ಥಿತಿ — 1 | |
| | (D) ಅತ್ಯಧಿಕ ಸಾಂದ್ರತೆ ಮತ್ತು ಗುರುತ್ವವನ್ನು ಹೊಂದಿರುವ ಸೂಪರ್ನೋವಾ ಅವಶೇಷವಾಗಿರುತ್ತದೆ — (vi) ಕಪ್ಪು ಕುಳಿ — 1 | 4 |
| 15. | ಸರಳ ಲೋಲಕದ ಚಲನೆಯು ಸರಳ ಸಂಗತ ಚಲನೆಗೆ ಉದಾಹರಣೆಯಾಗಿದೆ. ಏಕೆ ? | |
| | ***ಉತ್ತರ :*** | |
| | ★ ಸರಳ ಲೋಲಕದ ಗುಂಡಿನ ಸ್ಥಾನವು ಕಾಲಬದ್ಧವಾಗಿ ಆವರ್ತನೆಗೊಳ್ಳುವುದು. | |
| | ★ ಕಾಯದ ದಿಕ್ಕು ಮತ್ತು ವೇಗೋತ್ಕರ್ಷಗಳು ತನ್ನಷ್ಟಕ್ಕೆ ತಾನೇ ಬದಲಾಗುವುದು. (ಯಾವುದಾದರೂ ಒಂದು) | 1 |
| 21. | ಉಷ್ಣ ಇಂಜಿನ್‌ನ ದಕ್ಷತೆ ಎಂದರೇನು ? ಉಷ್ಣ ಇಂಜಿನ್‌ನ ದಕ್ಷತೆಯನ್ನು ಲೆಕ್ಕಾಚಾರ ಮಾಡುವ ಸೂತ್ರವನ್ನು ಬರೆಯಿರಿ. | |
| | ***ಅಥವಾ*** | |
| | ಪೆಟ್ರೋಲ್ ಇಂಜಿನ್‌ನ ಕಾರ್ಯವಿಧಾನವು ಒಳಗೊಂಡಿರುವ ಹಂತಗಳನ್ನು ಬರೆಯಿರಿ. | |
| | ***ಉತ್ತರ :*** | |
| | ★ ಉಷ್ಣ ಇಂಜಿನ್ ಮಾಡಿದ ಉಪಯುಕ್ತ ಕೆಲಸ ಮತ್ತು ಬಳಸಿಕೊಂಡ ಉಷ್ಣಗಳ ಅನುಪಾತ. — 1 | |
| | ★ $\eta = \frac{W}{H} \times 100$ — 1 | 2 |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | i) ಭುಕ್ತಿ ಹೊಡೆತ<br>ii) ಸಂಪೀಡನಾ ಹೊಡೆತ<br>iii) ಜ್ವಲನ ಹೊಡೆತ }<br>iv) ವ್ಯಾಕೋಚಕ ಹೊಡೆತ } ಶಕ್ತಿ ಹೊಡೆತ<br>iv) ನಿಷ್ಕಾಸ ಹೊಡೆತ (ಯಾವುದಾದರೂ ನಾಲ್ಕು) 4 × ½ | 2 |
| 24. | ಸೌರಕೋಶ ಎಂದರೇನು ? ಸೌರಕೋಶದ ಯಾವುದಾದರೂ ಎರಡು ಉಪಯೋಗಗಳನ್ನು ಬರೆಯಿರಿ.<br>***ಉತ್ತರ :***<br>ಸೌರಶಕ್ತಿಯನ್ನು ವಿದ್ಯುತ್‌ಶಕ್ತಿಯನ್ನಾಗಿ ಪರಿವರ್ತಿಸುವ ಸಾಧನ. 1<br>*ಸೌರಕೋಶದ ಉಪಯೋಗಗಳೆಂದರೆ :*<br>i) ಟ್ರಾಫಿಕ್ ಸಂಕೇತಗಳಲ್ಲಿ<br>ii) ಸಿಗ್ನಲ್ ಲೈಟ್‌ಗಳಲ್ಲಿ<br>iii) ಸೋಲಾರ್ ದೀಪಗಳಲ್ಲಿ<br>iv) ಸೋಲಾರ್ ಪಂಪ್‌ಗಳಲ್ಲಿ<br>v) ಕೃತಕ ಉಪಗ್ರಹಗಳಲ್ಲಿ<br>vi) ಕಾಲ್ಕ್ಯುಲೇಟರ್‌ಗಳಲ್ಲಿ ವಿದ್ಯುತ್ ಶಕ್ತಿಯ ಆಕರವಾಗಿ ಬಳಸುತ್ತಾರೆ<br>(ಯಾವುದಾದರೂ ಎರಡು) 2 × ½ | 2 |
| 27. | ಹಬೆ ಇಂಜಿನ್‌ನ ವ್ಯಾಕೋಚಕ ಹೊಡೆತವನ್ನು ತೋರಿಸುವ ಚಿತ್ರವನ್ನು ಬರೆಯಿರಿ. ಕೆಳಗಿನ ಭಾಗಗಳನ್ನು ಗುರುತಿಸಿ :<br>i) ಪಿಸ್ಟನ್<br>ii) ಆಗಮ ಕವಾಟ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

*ಉತ್ತರ :*




ಚಿತ್ರಕ್ಕೆ 1

ಭಾಗಗಳಿಗೆ ½ + ½ — 2

30. ಒಂದು ಹಡಗಿನಲ್ಲಿರುವ ಸೋನಾರ್ ಸಾಧನವನ್ನು ವಿಭಿನ್ನ ಸ್ಥಳಗಳಲ್ಲಿ ಸಮುದ್ರದ ಆಳ ಕಂಡುಹಿಡಿಯಲು ಉಪಯೋಗಿಸಲಾಗಿದೆ. ಒಂದು ಸ್ಥಳದಲ್ಲಿ 6 ಸೆಕೆಂಡ್‌ಗಳ ನಂತರ ಮತ್ತು ಇನ್ನೊಂದು ಸ್ಥಳದಲ್ಲಿ 4 ಸೆಕೆಂಡ್‌ಗಳ ನಂತರ ಶ್ರವಣಾತೀತ ತಂರಗಗಳು ಪ್ರತಿಫಲಿಸಿದರೆ, ಆ ಎರಡು ಸ್ಥಳಗಳಲ್ಲಿ ಸಾಗರದ ಆಳಗಳಿಗಿರುವ ಅನುಪಾತವನ್ನು ಕಂಡುಹಿಡಿಯಿರಿ.

ಒಂದು ಸ್ಥಳದಲ್ಲಿ ಸಾಗರದ ಆಳ $d_1 = \frac{vt_1}{2} = \frac{6v}{2}$ ½

ಇನ್ನೊಂದು ಸ್ಥಳದಲ್ಲಿ ಸಾಗರದ ಆಳ $d_2 = \frac{vt_2}{2} = \frac{4v}{2}$ ½

ಆಳಗಳ ಅನುಪಾತ $\frac{d_1}{d_2} = \frac{3V}{2V} \Rightarrow 3:2$ ಅಥವಾ $2:3$ 1 — 2

33. ಕೆಳಗಿನ ಕೋಷ್ಟಕವನ್ನು ಗಮನಿಸಿ :


| ***ಧಾತು*** | $P$ | $Q$ | $R$ |
|---|---|---|---|
| ***ಪರಮಾಣು ಸಂಖ್ಯೆ*** | 13 | 14 | 15 |

'$n$' ರೀತಿಯ ಅರೆವಾಹಕಗಳ ತಯಾರಿಕೆಗೆ ಕೋಷ್ಟಕದಿಂದ ನೀವು ಯಾವ ಧಾತುಗಳನ್ನು ಆಯ್ಕೆ ಮಾಡಿಕೊಳ್ಳುತ್ತೀರಿ ? ನಿಮ್ಮ ಆಯ್ಕೆಗೆ ವೈಜ್ಞಾನಿಕ ಕಾರಣಗಳನ್ನು ಕೊಡಿ.

i) $Q$ ಮತ್ತು $R$ ಧಾತುಗಳನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. 1

ii) $Q$ ಧಾತುವು ನಾಲ್ಕು ವೇಲೆನ್ಸ್ ಇಲೆಕ್ಟ್ರಾನ್‌ಗಳನ್ನು ಹೊಂದಿರುವುದು. ½

iii) $R$ ಧಾತುವು ಐದು ವೇಲೆನ್ಸ್ ಇಲೆಕ್ಟ್ರಾನ್‌ಗಳನ್ನು ಹೊಂದಿರುವುದು. ½ — 2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | ಡೀಸೆಲ್ ಇಂಜಿನ್‌ಗೆ ಕಿಡಿಬೆಣೆಯ ಅಗತ್ಯವಿಲ್ಲ. ಏಕೆ ? | |
| | i) ಸಂಪೀಡನಾ ಅನುಪಾತ 14 : 1 ರಿಂದ 25 : 1 ಇರುವುದು. 1 | |
| | ii) ಈ ಸಂಪೀಡನೆಯಿಂದಾಗಿ ಸಿಲಿಂಡರ್ ಒಳಗೆ ಸುಮಾರು 1000 K ನಷ್ಟು ತಾಪ ಉತ್ಪತ್ತಿಯಾಗುವುದರಿಂದ. 1 | 2 |
| 39. | ಏಕಹಂತ ರಾಕೆಟ್‌ನ ಚಿತ್ರವನ್ನು ಬರೆದು ಪೇಲೋಡ್ ಅನ್ನು ಗುರುತಿಸಿ. | |
| | ***ಉತ್ತರ :*** | |
| |  | |
| | ಚಿತ್ರಕ್ಕೆ 1½ | |
| | ಭಾಗಕ್ಕೆ ½ | 2 |
| 42. | ವಿದ್ಯುತ್ಕಾಂತೀಯ ಪ್ರೇರಣೆಯ ಪ್ರಯೋಗದಲ್ಲಿ ಸುರುಳಿಯಲ್ಲಿ ಪ್ರೇರಿತವಾಗುವ ವಿದ್ಯುಚ್ಚಾಲಕ ಬಲವನ್ನು ಹೇಗೆ ಹೆಚ್ಚಿಸಬಹುದು ಎಂಬುದನ್ನು ವಿವರಿಸಿ. | |
| | i) ಸುರುಳಿಯ ಸುತ್ತುಗಳ ಸಂಖ್ಯೆಯನ್ನು ಹೆಚ್ಚಿಸಿ | |
| | ii) ಕಾಂತಕ್ಷೇತ್ರದ ಬಲವನ್ನು ಹೆಚ್ಚಿಸಿ | |
| | iii) ಕಾಂತದ ಚಲನೆಯ ವೇಗವನ್ನು ಹೆಚ್ಚಿಸಿ | |
| | iv) ಸುರುಳಿಯ ವಿಸ್ತೀರ್ಣ ಕಡಿಮೆ ಮಾಡಿ (ಯಾವುದಾದರೂ ಎರಡು) 1 + 1 | 2 |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

47. ನ್ಯೂಕ್ಲೀಯ ವಿದ್ಯುತ್ ಕ್ರಿಯಾಕಾರಿಯ ಚಿತ್ರವನ್ನು ಬರೆಯಿರಿ. ಕೆಳಗಿನ ಭಾಗಗಳನ್ನು ಗುರುತಿಸಿ :

i) ಪ್ರತಿಫಲಕ

ii) ಉಷ್ಣವಿನಿಮಯಕಾರಿ

***ಉತ್ತರ :***




ಚಿತ್ರಕ್ಕೆ 2

ಭಾಗಕ್ಕೆ ½ + ½ 3

50. a) ವಿದ್ಯುತ್ ಪರಿವರ್ತಕದ ತತ್ವವನ್ನು ವಿವರಿಸಿ. ವಿದ್ಯುತ್ ಪರಿವರ್ತಕದಲ್ಲಿ ಪ್ರೈಮರಿ ಮತ್ತು ಸೆಕೆಂಡರಿ ಸುರುಳಿಗಳ ವೋಲ್ಟೇಜ್ ಮತ್ತು ಅವುಗಳ ಸುತ್ತುಗಳ ಸಂಖ್ಯೆಗಳಿಗಿರುವ ಸಂಬಂಧವೇನು ?

b) ದೂರದ ಸ್ಥಳಗಳಿಗೆ ವಿದ್ಯುತ್ ಅನ್ನು ರವಾನಿಸಲು ಮತ್ತು ಗೃಹಬಳಕೆಗೆ ವಿದ್ಯುತ್ ವಿತರಣೆ ಮಾಡಲು ಉಪಯೋಗಿಸುವ ವಿದ್ಯುತ್ ಪರಿವರ್ತಕಗಳ ವಿಧಗಳನ್ನು ಹೆಸರಿಸಿ.

***ಅಥವಾ***

a) ಎ.ಸಿ. ಡೈನಮೋ ಮತ್ತು ಡಿ.ಸಿ. ಡೈನಮೋಗಳಿಗಿರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.

b) ಫ್ಯಾರಡೆಯ ವಿದ್ಯುತ್ಕಾಂತೀಯ ಪ್ರೇರಣೆಯ ನಿಯಮಗಳನ್ನು ನಿರೂಪಿಸಿ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | a) ಪರಸ್ಪರ ಪ್ರೇರಣೆ | 1 | |
| | ಒಂದು ವಾಹಕ ಸುರುಳಿಯಲ್ಲಿ ವಿದ್ಯುತ್‌ಪ್ರವಾಹ ಬದಲಾವಣೆಯಾದಾಗ ಹತ್ತಿರದ ಇನ್ನೊಂದು ವಾಹಕ ಸುರುಳಿಯಲ್ಲಿ ವಿದ್ಯುತ್‌ಪ್ರವಾಹ ಪ್ರೇರಣೆಯಾಗುವುದು. | 1 | |
| | $\frac{V_s}{V_p} = \frac{N_s}{N_p}$ | 1 | |
| | b) ವಿದ್ಯುತ್ ರವಾನಿಸಲು : ಹೆಚ್ಚು ವೋಲ್ಟೇಜ್ ಪರಿವರ್ತಕ | ½ | |
| | ವಿದ್ಯುತ್ ವಿತರಣೆ ಮಾಡಲು : ಕಡಿಮೆ ವೋಲ್ಟೇಜ್ ಪರಿವರ್ತಕ | ½ | 4 |

***ಅಥವಾ***

a)

| ಎ.ಸಿ. ಡೈನಮೋ | ಡಿ.ಸಿ. ಡೈನಮೋ |
|---|---|
| 1. ಪರ್ಯಾಯ ವಿದ್ಯುತ್ತನ್ನು ಉತ್ಪಾದಿಸುತ್ತದೆ | 1. ನೇರ ವಿದ್ಯುತ್ ಅನ್ನು ಉತ್ಪಾದಿಸುತ್ತದೆ |
| 2. ಪ್ರೇರಿತ ವಿದ್ಯುತ್‌ಪ್ರವಾಹದ ದಿಕ್ಕಿನಲ್ಲಿ ಬದಲಾವಣೆ ಇರುತ್ತದೆ | 2. ಪ್ರೇರಿತ ವಿದ್ಯುತ್ ಪ್ರವಾಹದ ದಿಕ್ಕಿನಲ್ಲಿ ಬದಲಾವಣೆ ಇರುವುದಿಲ್ಲ |
| 3. ಜಾರು ಉಂಗುರಗಳನ್ನು ಹೊಂದಿದೆ | 3. ಸೀಳು ಉಂಗುರಗಳನ್ನು (ಒಡಕು) ಹೊಂದಿದೆ |

(ಯಾವುದಾದರೂ ಎರಡು ವ್ಯತ್ಯಾಸ) 1 + 1

b) *ಫ್ಯಾರಡೆಯ ವಿದ್ಯುತ್ಕಾಂತೀಯ ಪ್ರೇರಣೆಯ ನಿಯಮಗಳು :*

*ಒಂದನೆಯ ನಿಯಮ :* ಒಂದು ವಾಹಕಕ್ಕೆ ಸಂಬಂಧಿಸಿದ ಕಾಂತಕ್ಷೇತ್ರವು ಬದಲಾದಾಗ ವಾಹಕದಲ್ಲಿ ವಿದ್ಯುತ್‌ಚಾಲಕ ಬಲ ಉಂಟಾಗುತ್ತದೆ. 1

*ಎರಡನೆಯ ನಿಯಮ :* ಪ್ರೇರಿತ ವಿದ್ಯುತ್‌ಚಾಲಕ ಬಲದ ಪರಿಮಾಣವು ವಾಹಕಕ್ಕೆ ಹೊಂದಿಕೊಂಡಿರುವ ಕಾಂತಕ್ಷೇತ್ರದ ಬದಲಾವಣೆಯ ದರಕ್ಕೆ ನೇರ ಅನುಪಾತದಲ್ಲಿರುತ್ತದೆ. 1 — 4